SEVA BHARATHI
सेवा ही परमो धर्मः

ಸಂಚಿಕೆ : 04
ಸಂಪುಟ : 05

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e-ನ್ಯೂಸ್ ಲೆಟರ್ – ಏಪ್ರಿಲ್ 2024

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216






## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಯುಗಾದಿ ಸಂಭ್ರಮಾಚರಣೆ

## ಗೀತಾಧ್ಯಯನ ಮತ್ತು ಗೀತಾ ಅಭ್ಯಾಸದಿಂದ ಮನಸ್ಸನ್ನು ನಿರಂತರ ಸಂತೋಷ ಹಾಗೂ ಸಮಾಧಾನದಲ್ಲಿಡಬಹುದು: ನಂದೋಡಿ

## ಬೆಂಗಳೂರಿನ ಎಪಿಡಿ ವತಿಯಿಂದ ಮೋಟಿವೇಷನ್ ತ್ರಿವೀಲ್ ಗಾಲಿಕುರ್ಚಿ ವಿತರಣೆ

## ಪ್ರಕರ್ಷ ಅಕಾಡಮಿಯ ಆರೋಹಣ ತರಬೇತಿ

## ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗನ ಜೀವನದ ದಿಕ್ಕು ಬದಲಿಸಿದ ನರ್ಸರಿ ಗಿಡ ವ್ಯಾಪಾರ ಹಾಗೂ ರಿಯಲ್ ಎಸ್ಟೇಟ್ ಉದ್ಯಮ

ಯಶೋಗಾಥೆ

## ನಮ್ಮಿಂದಿಷ್ಟು

ಆತ್ಮೀಯ ಬಂಧುಗಳಿಗೆ ಹೊಸ ವರುಷದ ಶುಭಾಶಯಗಳು

ಬೆನ್ನುಹುರಿ ಅಪಘಾತಗೊಂಡ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ತನ್ನ ಆರೋಗ್ಯದ ಬಗ್ಗೆ ಸದಾ ಜಾಗರೂಕನಾಗಿರುವುದಲ್ಲದೆ ಮಾನಸಿಕ ನೆಮ್ಮದಿಯನ್ನು ಹೊಂದಬೇಕಿದೆ. ಆದ ಕಾರಣ ನಿರಂತರ ಭಗವದ್ಗೀತೆಯ ಪಠಣ, ಅರ್ಥ, ಸಂದೇಶವನ್ನು ತಿಳಿದುಕೊಳ್ಳುವುದು ಇದಕ್ಕೆಲ್ಲ ಪರಿಹಾರವಾಗಬಹುದು ಎಂಬ ನಿಟ್ಟಿನಲ್ಲಿ ಸೇವಾಧಾಮ ಕೇಂದ್ರದಲ್ಲಿ ಗೀತ ಸಂದೇಶ ಕಾರ್ಯ ಕ್ರಮವನ್ನು ನಿತ್ಯ ಸಾಯಂಕಾಲ 1 ಗಂಟೆ ಅಭ್ಯಸಿಸಲು ಯೋಜನೆ ರೂಪಿಸಿ ಪ್ರಾರಂಭಗೊಳಿಸಿದ್ದೇವೆ. ಈಗಾಗಲೇ 3 ವರ್ಷಗಳಿಂದ ಗೀತಾಯಜ್ಞವನ್ನು ನಡೆಸಿಕೊಡುತ್ತಿರುವ ಸಾವಿರಾರು ಮಂದಿಗೆ ಜೀವನ ಯಶ ಕಾಣುವುದಕ್ಕೆ ಕಾರಣೀಭೂತರಾಗಿರುವ ಹಿರಿಯ ಗುರುಗಳೂ, ನಮ್ಮ ಸೇವಾಕಾರ್ಯಗಳಿಗೆ ಮಾರ್ಗದರ್ಶನ ನೀಡುತ್ತಿರುವ ಶ್ರೀಯುತ ಸುಬ್ರಾಯ ನಂದೋಡಿಯವರು ಈ ಯಜ್ಞಕ್ಕೆ ಸದಾ ಬೆನ್ನೆಲುಬಾಗಿರುತ್ತಾರೆ ಎಂಬುದು ಉಲ್ಲೇಖ ನೀಯ.

ಸಂಸ್ಥೆಗಳ ಅಭಿವೃದ್ಧಿಯ ದೃಷ್ಟಿಯಲ್ಲಿ Project Cycle, Compliance, HR Finance & Fund Raising ಬಗ್ಗೆ ತರಬೇತಿ ನೀಡಲು ರಾಷ್ಟ್ರೀಯ ಸೇವಾಭಾರತಿ ಹಾಗೂ ಬೆಂಗಳೂರಿನ ಪ್ರಕರ್ಷ ಅಕಾಡೆಮಿಯವರ ಸಂಯುಕ್ತ ಆಶ್ರಯದಲ್ಲಿ ಆಯೋಜನೆಗೊಂಡಿರುವುದು 'ಆರೋಹಣಮ್' ಎಂಬ ಯೋಜನೆ. ಸುಮಾರು 15 ಎನ್.ಜಿ.ಒ.ಗಳು ಇದರಲ್ಲಿ ಆಯ್ಕೆಗೊಂಡಿದ್ದು ನಮ್ಮ ಸೇವಾಭಾರತಿಯೂ ಸೇರಿಕೊಂಡಿದೆ ಎಂಬುದು ಸಂತೋಷಕರ.

ಎಪಿಡಿಯ ಸಹಭಾಗಿತ್ವದಲ್ಲಿ ದಿನಾಂಕ 24.04.2024 ರಂದು Motivation ಕಂಪೆನಿಯ ಮೂರು ಚಕ್ರದ (WM3) ಗಾಲಿಕುರ್ಚಿಗಳನ್ನು ಅರ್ಹ 07 ದಿವ್ಯಾಂಗರಿಗೆ ಉಚಿತವಾಗಿ ಒದಗಿಸಿಕೊಟ್ಟಿರುತ್ತೇವೆ. ಒಟ್ಟು 09 ಫಲಾನುಭವಿಗಳು ಪಡೆದುಕೊಂಡಿರುತ್ತಾರೆ.

*ಸೇವಾ ಹೀ ಪರಮೋ ಧರ್ಮಃ*

ಇತೀ ತಮ್ಮವ,
ಕೆ. ವಿನಾಯಕ ರಾವ್

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯಶಂಕರ್
5. ಶ್ರೀ ಹರೀಶ್ ಟಿ. ಪಿ.
6. ಶ್ರೀ ಗೋಪಾಲ ಕೆ. ವಿ.
7. ಶ್ರೀಮತಿ ಜೊಯ್ಸ್ ಫೆರೇರಾ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ವಿಜಯ ಕೊಡವೂರು
10. ಡಾ. ಮುರಳೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಯುಗಾದಿ ಸಂಭ್ರಮಾಚರಣೆ

## ಗೀತಾಧ್ಯಯನ ಮತ್ತು ಗೀತಾ ಅಭ್ಯಾಸದಿಂದ ಮನಸ್ಸನ್ನು ನಿರಂತರ ಸಂತೋಷ ಹಾಗೂ ಸಮಾಧಾನದಲ್ಲಿಡಬಹುದು: ನಂದೋಡಿ






**ಸೌತಡ್ಕ (ಎ.08):** ಸೇವಾಭಾರತಿ –ಸೇವಾಧಾಮ ವತಿಯಿಂದ ಯುಗಾದಿ ಸಂಭ್ರಮ ಮತ್ತು ಗೀತ ಸಂದೇಶ ಕಾರ್ಯಕ್ರಮವು ಎಪ್ರಿಲ್ 08 ರಂದು ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ನಡೆಯಿತು.

ಸೌತಡ್ಕದ ಸೇವಾಧಾಮದಲ್ಲಿ, ಬೆನ್ನುಮೂಳೆ ಮುರಿತಕ್ಕೊಳಗಾಗಿ, ಶುಶ್ರೂಷೆ ಪಡೆಯುತ್ತಿರುವವರಿಗೆ ಮನೋಬಲ ಹಾಗೂ ಆತ್ಮಸ್ಥೈರ್ಯ ಹೆಚ್ಚಿಸಲು ಗೀತಾ ಸಂದೇಶ ಪಠಣ ರಾಮಬಾಣವಾಗಲಿದೆ ಎಂದು ಗೀತಾಜ್ಞಾನ ಯಜ್ಞದ ಪ್ರಧಾನ ಗುರುಗಳಾದ, ಶ್ರೀಯುತ ಸುಬ್ರಾಯ ನಂದೋಡಿಯವರು ಹೇಳಿ ಹೊಸ ವರ್ಷಕ್ಕೆ ಶುಭ ಹಾರೈಸಿದರು.

ಅವರು ಯುಗಾದಿ ಆಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಗೀತೆಯ ಪಠಣ ಅಭ್ಯಾಸ ಮಾಡಿಸಿ ಅದರ ಅನಿವಾರ್ಯತೆಗಳನ್ನು ತಿಳಿಸಿದರು. ಅಧ್ಯಕ್ಷರಾದ ಶ್ರೀಮತಿ ಸ್ವರ್ಣ ಗೌರಿ, ಕಾರ್ಯದರ್ಶಿ ಶ್ರೀ ಬಾಲಕೃಷ್ಣ ನೈಮಿಷ ಶ್ರೀಯುತ ವಿನಾಯಕ ರಾವ್, ಸನಿವಾಸಿಗಳು, ಅವರ ಆರೈಕೆದಾರರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಸೇವಾ ಸಂಯೋಜಕ ಚಂದನ್ ಗುಡಿಗಾರ್ ಸ್ವಾಗತಿಸಿ ಪ್ರಬಂಧಕರಾದ ಮೋಹನ್ ನಿರೂಪಿಸಿ ಧನ್ಯವಾದವಿತ್ತರು.

## ಮಹನೀಯ ದಾನಿಗಳು

ಶ್ರೀ ವಿಠ್ಠಲ್ ಎಂ. ಕುಂಗೂರ್, ಬೆಂಗಳೂರು
ಶ್ರೀ ಹರೀಶ್ ಗಂಬೀರ್, ಬೆಳ್ತಂಗಡಿ
ಕು. ಆರತಿ. ಕೆ, ಬೆಂಗಳೂರು
ಕು. ಜಯ, ಬೆಂಗಳೂರು
ಶ್ರೀ ನಾರಾಯಣ ಫಡ್ಕೆ, ಮುಂಡಾಜೆ
ಶ್ರೀ ಶೈಲೇಶ್ ಹೆಗ್ಡೆ, ನಲ್ಯಾಡಿ
ಶ್ರೀ ಹರಿಕಿರಣ್ ಯು.ಆರ್, ಬದಿಯಡ್ಕ
ಕು. ರಾಜೇಶ್ವರಿ ರಾವ್, ಬೆಂಗಳೂರು
ಶ್ರೀ ಸುಕೇಶ್, ಬೆಂಗಳೂರು
ಶ್ರೀ ಆರ್.ಸಿ. ಶೆಟ್ಟಿ, ಬೆಂಗಳೂರು
ಶ್ರೀಮತಿ ಸ್ವಾತಿ, ಬೆಳ್ತಂಗಡಿ
ಶ್ರೀ ಪ್ರೀತಮ್, ಪುತ್ತೂರು
ಶ್ರೀ ರೋಹಿತ್ ಯು., ಸುಳ್ಯ
ಕು. ವಿನೋಲಿಯ ಜಾಸ್ಮಿನ್ ಮಿನೇಜಸ್, ಪುತ್ತೂರು
ಶ್ರೀ ಲಕ್ಷ್ಮಿನಾರಾಯಣ ರಾವ್, ಧರ್ಮಸ್ಥಳ
ಶ್ರೀ ವಾಮನ ಬೆಂಡೆ, ಉಜಿರೆ
ಶ್ರೀಮತಿ ಜೋಸ್ಪಿನ ಪಿ.ಟಿ, ಬೆಳ್ತಂಗಡಿ
ಕು. ಸಮೀಕ್ಷಾ, ಧರ್ಮಸ್ಥಳ
ಶ್ರೀ ರಾಜೇಂದ್ರ ಅಜ್ರಿ, ಕನ್ಯಾಡಿ
ಶ್ರೀಮತಿ ಪ್ರೇಮ, ಕುಂದಾಪುರ
ಕು. ದೀಕ್ಷಾ, ಬೆಂಗಳೂರು
ಶ್ರೀ ಶಿವರಾಜ್, ಬೆಂಗಳೂರು
ಕು. ದಿವ್ಯಾ ರೈ, ಬೆಂಗಳೂರು
ಶ್ರೀ ಅಭಿಷೇಕ್ ಶೆಟ್ಟಿ, ಕುಂದಾಪುರ
ಕು. ಪೂಜಾ, ಬೆಂಗಳೂರು
ಶ್ರೀ ವಿಜಯ ಮರಾಠಿ ಬಿ, ಉಡುಪಿ
ಕು. ಸೈಸ್ಥ ತಬಸುಮ್, ಬೆಂಗಳೂರು
ಶ್ರೀ ನಿತಿನ್ ಶೆಟ್ಟಿ, ಬೆಂಗಳೂರು
ಶ್ರೀ ರಘು, ಬೆಂಗಳೂರು
ಶ್ರೀ ರಚಿತ್, ಧರ್ಮಸ್ಥಳ
ಶ್ರೀ ಅಖಿಲೇಶ್ ಕೆ, ಮಂಜೇಶ್ವರ
ಶ್ರೀ ಅಖಿಲೇಶ್ ಎಸ್, ಚಿಕ್ಕಮಗಳೂರು
ಕು. ರಾಜೇಶ್ವರಿ ರಾವ್, ಬೆಂಗಳೂರು
ಕು. ಲಾಸ್ಯ, ಬೆಂಗಳೂರು
ಕು. ದರ್ಶಿನಿ, ಬೆಂಗಳೂರು
ಶ್ರೀ ಸುಷ್ಮಾ ಗಿರೀಶ್, ಬೆಂಗಳೂರು
ಕು. ವಿಜೇತ, ಬೆಂಗಳೂರು
ಶ್ರೀ ಸುಮಂತ್, ಬೆಂಗಳೂರು
ಶ್ರೀಮತಿ ಪ್ರಫುಲ್ಲಾ ರಂಜಿತ್, ಸುಳ್ಯ
ಕು. ಶೈಲಾ, ಹೆಬ್ರಿ
ಕು. ಸಂತೃಪ್ತಿ ಆರ್ ಫಡ್ಕೆ, ಬೆಳ್ತಂಗಡಿ
ಶ್ರೀಮತಿ ಪವಿತ್ರ ಜಿ.ಕೆ., ನಿಡ್ಲೆ

## ವಸ್ತು ರೂಪದಲ್ಲಿ ದೇಣಿಗೆ ನೀಡಿದ ದಾನಿಗಳು

ಅಮೃತ ಶಿಶು ನಿವಾಸ, ಬೆಂಗಳೂರು
ಉಪ್ಪಿನಂಗಡಿ ಹವ್ಯಕಮಂಡಲ, ಉಜಿರೆ ವಲಯ
ಶ್ರೀ ಲಕ್ಷ್ಮಿನಾರಾಯಣ ಭಟ್, ಪಾರ್ಪಿಕಲ್ಲು

## ಸೇವಾನಿಧಿ ದಾನಿಗಳು

ವೆಲ್ವೆಟ್ ಟ್ರಾವೆಲ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಕು. ಸಂತೃಪ್ತಿ ಆರ್ ಫಡ್ಕೆ, ಬೆಳ್ತಂಗಡಿ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಮಾಸ್ಟರ್ ಅದ್ವೈತ್, ಕನ್ಯಾಡಿ
ಶ್ರೀ ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
ಶ್ರೀ ಕಾರ್ತಿಕ್ ಕೆ., ಧರ್ಮಸ್ಥಳ
ಶ್ರೀ ಬಾಲಕೃಷ್ಣ ರಾವ್ ಕೆ., ಕನ್ಯಾಡಿ
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀಮತಿ ಬಬಿತ, ಕನ್ಯಾಡಿ
ಶ್ರೀಮತಿ ಸವಿತ ಮನೋಹರ್, ಬೆಳ್ತಂಗಡಿ
ಶ್ರೀಮತಿ ಶಾಂತ ಸುರೇಶ್, ಉಜಿರೆ
ಡಾ. ರಾಮಕೃಷ್ಣ ಜಿ.ಎಸ್, ಕನ್ಯಾಡಿ
ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
ಶ್ರೀ ಕೆ. ಸೂರ್ಯನಾರಾಯಣ ರಾವ್, ಧರ್ಮಸ್ಥಳ
ಶ್ರೀ ಶಿವಕುಮಾರ್ ಆರ್ಟ್ಸ್, ಉಜಿರೆ
ಶ್ರೀ ಮಧುಸೂದನ್ ಎಚ್.ಕೆ, ಉಜಿರೆ
ಶ್ರೀ ಪುರುಷೋತ್ತಮ ಡಿ.ಎ., ಧರ್ಮಸ್ಥಳ
ಶ್ರೀ ಬಿ. ರಾಮದಾಸ್ ಭಂಡಾರ್ಕರ್, ಉಜಿರೆ
ಶ್ರೀ ಶ್ರೀಧರ್ ಕೆ.ವಿ., ಉಜಿರೆ

# ಬೆಂಗಳೂರಿನ ಎಪಿಡಿ ವತಿಯಿಂದ ಮೋಟಿವೇಷನ್ ತ್ರಿವೀಲ್ ಗಾಲಿಕುರ್ಚಿ ವಿತರಣೆ




**ಸೌತಡ್ಕ (ಏ.24):** ಬೆಂಗಳೂರಿನ ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸೆಬಿಲಿಟಿ ವತಿಯಿಂದ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಉಚಿತ ತ್ರೀವೀಲ್ ಗಾಲಿಕುರ್ಚಿಯನ್ನು ನೀಡಿದರು.

ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ದಿವ್ಯಾಂಗರ ಮುಂದಿನ ಭವಿಷ್ಯಕ್ಕೆ ಶುಭಹಾರೈಸಿ ಪ್ರೇರಣಾತ್ಮಕ ನುಡಿಗಳ ನ್ನಾಡಿದರು. ಬೆಂಗಳೂರಿನ ಎಪಿಡಿ ಸಂಸ್ಥೆಗೆ ಧನ್ಯವಾದ ತಿಳಿಸಿದರು.

ವೇದಿಕೆಯಲ್ಲಿ ಎಪಿಡಿ ಸಂಸ್ಥೆಯ ಶ್ರೀ ಅನ್ವೇಶ್, ಸಂಸ್ಥೆಯ ಹಿತೈಷಿಗಳಾದ ಶ್ರೀ ರಾಜೇಂದ್ರ ಅಜ್ರಿ ಹಾಗೂ ಸೇವಾಧಾಮದ ಫಿಸಿಯೋತೆರಪಿಸ್ಟ್ ಶ್ರೀ ಗಣೇಶ್ ಕಾರ್ತಿಕ್ ಉಪಸ್ಥಿತರಿದ್ದರು. ಕಾರ್ಯ ಕ್ರಮದಲ್ಲಿ 4 ಮಂದಿ ದಿವ್ಯಾಂಗರಿಗೆ ಸಾಂಕೇತಿಕವಾಗಿ 3 ವೀಲ್ ಗಾಲಿಕುರ್ಚಿ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಒಟ್ಟು 12 ಮಂದಿ ದಿವ್ಯಾಂಗರು ಪಾಲ್ಗೊಂಡಿ ದ್ದರು. ಕಾರ್ಯಕ್ರಮವನ್ನು ಸೇವಾಭಾರತಿ ಕ್ಷೇತ್ರಸಂಯೋಜಕರಾದ ಶ್ರೀ ನಾಗಾರ್ಜುನ್ ನಿರೂಪಿಸಿದರು.

*The world worries about disability more than disabled people do*

## ಪ್ರಕರ್ಷ ಅಕಾಡಮಿಯ ಆರೋಹಣ ತರಬೇತಿ

ಬೆಂಗಳೂರಿನ ಪ್ರಕರ್ಷ ಅಕಾಡಮಿ ಮತ್ತು ರಾಷ್ಟ್ರೀಯ ಸೇವಾಭಾರತಿಯ ಸಹಯೋಗದಲ್ಲಿ ಆಯ್ದ ಸರ್ಕಾರೇತರ ಸಂಘಸಂಸ್ಥೆಗಳ ಅಭಿವೃದ್ಧಿಗಾಗಿ "ಆರೋಹಣ" ತರಬೇತಿಯ ಪೂರ್ವಭಾವಿ ಪ್ರಾರಂಭಿಕ ವರ್ಗ ಬೆಂಗಳೂರಿನ ಎಬಿವಿಪಿಯ ಕಾರ್ಯಾಲಯ ಯುವಪಥದಲ್ಲಿ ಮಾರ್ಚ್ 31 ರಂದು ನಡೆಯಿತು.

ಸಂಘಸಂಸ್ಥೆಗಳು ಸಾಮಾಜಿಕವಾಗಿ ಮಾಡುವ ಸೇವಾ ಕಾರ್ಯಗಳನ್ನು ಇನ್ನಷ್ಟು ಉತ್ತಮ ರೀತಿಯಲ್ಲಿ ಪರಿಣಾಮಕಾರಿಯಾಗಿ ಮಾಡುವ ಉದ್ದೇಶ ಹಾಗೂ ನಿರಂತರತೆಗಾಗಿ ಸಂಘಸಂಸ್ಥೆಗಳ ಟ್ರಸ್ಟಿ ಹಾಗೂ ಸಿಬ್ಬಂದಿಯವರಿಗೆ ಈ ತರಬೇತಿಯನ್ನು 1 ವರ್ಷಗಳ ಕಾಲ ವಿವಿಧ ವಿಷಯಗಳ ಸಂಯೋಜನೆಯೊಂದಿಗೆ ಹಮ್ಮಿಕೊಳ್ಳುವ ಗುರಿ ಹೊಂದಲಾಗಿದೆ ಅಲ್ಲದೆ ಆರ್ಥಿಕ ಕ್ರೋಢೀಕರಣ, ಕಾರ್ಯಕ್ರಮಗಳ ಅನುಷ್ಠಾನ, ಸಂಸ್ಥೆಗಳ ನಡವಳಿಕೆ, ಆರ್ಥಿಕ ನಿರ್ವಹಣೆ, ಮಾನವ ಸಂಪನ್ಮೂಲಗಳ ಬಗ್ಗೆ ವಿಷಯತಜ್ಞರು ತರಬೇತಿ ನೀಡಲಿದ್ದಾರೆ.

ಈ ಯೋಜನೆಗೆ ಸೇವಾಭಾರತಿಯು ಆಯ್ಕೆಗೊಂಡಿದ್ದು ಮೊದಲ ಅವಧಿಗೆ ಖಜಾಂಚಿ ಶ್ರೀ ಕೆ. ವಿನಾಯಕ ರಾವ್ ಹಾಗೂ ಫಂಡ್ರೈಸಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ. ಭಾಗವಹಿಸಿದ್ದರು. ಪ್ರಕರ್ಷ ಅಕಾಡಮಿಯ ವೆಂಕಟೇಶ್ ಮೂರ್ತಿ, ಜಗದೀಶ್ ಮಯ್ಯ ಮತ್ತು ನಿರ್ವಹಿಸಿದ ಈ ಕಾರ್ಯಕ್ರಮದಲ್ಲಿ 15 ಸಂಘಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಪ್ರಕರ್ಶ ಅಕಾಡಮಿಯ ಆರೋಹಣಂನ ಮೊದಲ ತರಬೇತಿಯು ಎಪ್ರಿಲ್ 20 ರಂದು ಜರುಗಿತು.

ಮೊದಲ ತರಬೇತಿಯಲ್ಲಿ 'ಪ್ರಾಜೆಕ್ಟ್ ಸೈಕಲ್ ಮ್ಯಾನೇಜ್ಮೆಂಟ್' ಬಗ್ಗೆ ಮಾಹಿತಿ ನೀಡಿದರು. ಕಾರ್ಯಾಗಾರದಲ್ಲಿ ಸೇವಾಭಾರತಿ ಖಜಾಂಚಿ ಶ್ರೀ ಕೆ. ವಿನಾಯಕ ರಾವ್ ಹಾಗೂ ಸೀನಿಯರ್ ಮ್ಯಾನೇಜರ್ ಶ್ರೀ ಚರಣ್ ಕುಮಾರ್ ಪಾಲ್ಗೊಂಡಿದ್ದರು.

## ಏಪ್ರಿಲ್ ತಿಂಗಳಲ್ಲಿ ಗಾಲಿಕುರ್ಚಿ ವಿತರಣೆ





ಶ್ರೀ ಹರೀಶ್, ಬೆಂಗಳೂರು । ಶ್ರೀ ಸದಾಶಿವ, ಹಾಸನ



ಶ್ರೀ ಸುಂದರ ಮುಗೇರ, ಅರಸಿನ ಮಕ್ಕಿ

## ಸೇವಾಧಾಮಕ್ಕೆ ಹಿತೈಷಿಗಳಾದ ಶ್ರೀ ರಾಜೇಂದ್ರ ಅಜ್ರಿ ಭೇಟಿ




**ಸೌತಡ್ಕ( ಎ.24) :** ಸಂಸ್ಥೆಯ ಹಿತೈಷಿಗಳಾದ ಶ್ರೀ ರಾಜೇಂದ್ರ ಅಜ್ರಿ ಯವರು ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಎಪ್ರಿಲ್ 24 ರಂದು ಭೇಟಿ ನೀಡಿ, ಸನಿವಾಸಿಗಳೊಂದಿಗೆ ಸಂವಾದ ನಡೆಸಿ ಎಲ್ಲರಿಗೂ ಶುಭ ಹಾರೈಸಿದರು. ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ ಚೆಕ್‌ನ್ನು ದೇಣಿಗೆ ರೂಪದಲ್ಲಿ ಸಂಸ್ಥೆಗೆ ಹಸ್ತಾಂತರಿಸಿದರು.

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ಪ್ರಕಾಶ ಆದ ನಾನು ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನಿಂದ ಬಂದಿರುತ್ತೇನೆ. ನಾನು ಬೈಕ್ ಅಪಘಾತದಿಂದ ಬಿದ್ದು T/5 ಇಂಜ್ಯೂರಿಯಾಗಿರುತ್ತದೆ. ನಾನು ಕುಂದಾಪುರದ ಚಿನ್ಮಯಿ ಆಸ್ಪತ್ರೆಗೆ ಮೊದಲು ಭೇಟಿಯಾಗಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಆದರ್ಶ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದಿರುತ್ತೇನೆ.

ನನಗೆ ಶಶಾಂತ್ ಎಂ. ಮನೆಗೆ ಭೇಟಿನೀಡಿ ಸೇವಾಧಾಮದ ಸಲಹೆ ನೀಡಿರುತ್ತಾರೆ. ಆಮೇಲೆ ಸೇವಾಧಾಮಕ್ಕೆ ದಿನಾಂಕ 06/11/2023 ರಂದು ಬಂದಿರುತ್ತೇನೆ. ನಾನು 2 ತಿಂಗಳು ಥೆರಪಿಯನ್ನು ನಮಗೆ ತುಂಬಾ ಚೆನ್ನಾಗಿ ಹೇಳಿಕೊಟ್ಟಿರುತ್ತಾರೆ. ನಾನು ಬರುವಾಗ ಮಲಗಿದ ಸ್ಥಿತಿಯಲ್ಲಿ ಬಂದಿರುತ್ತೇನೆ. ಸೇವಾಧಾಮಕ್ಕೆ ಬಂದ ನಂತರ ಯೋಗ ಮತ್ತು ಥೆರಪಿಯನ್ನು ಚೆನ್ನಾಗಿ ಮಾಡಿ ನನ್ನ ಕೆಲಸವನ್ನು ನಾನೇ ಮಾಡಿಕೊಳ್ಳುತ್ತೇನೆ.

ನಾನು ತಾ:06/01/2024 ರಂದು ಡಿಸ್ಚಾರ್ಜ್ ಆಗಿರುತ್ತೇನೆ. ಹಾಗೂ ನನಗೆ ಮುಂದೆ ಬರುವ ಸಮಸ್ಯೆಗಳ ಬಗ್ಗೆ ಇಲ್ಲಿ ಅರಿವು ಮೂಡಿಸಿರುತ್ತಾರೆ. ಇದೆಲ್ಲದಕ್ಕೂ ಅವಕಾಶ ಮಾಡಿಕೊಟ್ಟ ಸೇವಾಭಾರತಿಯ ಅಧ್ಯಕ್ಷರು, ಸಂಸ್ಥಾಪಕರು, ಕಾರ್ಯದರ್ಶಿ ಹಾಗೂ ಸಿಬ್ಬಂದಿವರ್ಗದವರಿಗೆ ನನ್ನ ಧನ್ಯವಾದಗಳು

ಧನ್ಯವಾದಗಳೊಂದಿಗೆ

ನಿಮ್ಮ ವಿಶ್ವಾಸಿ
**ಶ್ರೀ ಪ್ರಕಾಶ್ ಬೈಂದೂರು**

*I dont need easy, I just need possible*

## ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...



ಶ್ರೀ ಪುರುಷೋತ್ತಮ ಎಸ್. ಮರಾಠಿ
ಉತ್ತರ ಕನ್ನಡ



ಕು. ಸಂತೃಪ್ತಿ ಆರ್ ಫಡ್ಕೆ, ಬೆಳ್ತಂಗಡಿ



ಶ್ರೀ ಯತೀಶ್ ಎಸ್. ಸುವರ್ಣ, ಕನ್ಯಾಡಿ



ಶ್ರೀಮತಿ ಜೋಸ್ಪಿನ ಪಿ. ಟಿ., ಬೆಳ್ತಂಗಡಿ



ಶ್ರೀ ಮೋಹನ್ ಎಸ್, ನಿಡ್ಲೆ



ಶ್ರೀ ರಾಜೇಂದ್ರ ಅಜ್ರಿ, ಕನ್ಯಾಡಿ



ಶ್ರೀಮತಿ ಸವಿತಾ ಎಂ. ರಾವ್, ಕನ್ಯಾಡಿ



ಡಾ. ರಾಮಕೃಷ್ಣ ಭಟ್ ಜಿ. ಎನ್, ಕನ್ಯಾಡಿ



ಶ್ರೀ ಮಧ್ವಮೂರ್ತಿ ಪಿ, ಉಡುಪಿ



ಶ್ರೀ ಉಮೇಶ್ ಮತ್ತು
ಶ್ರೀಮತಿ ಶ್ರೀರಕ್ಷಾ, ಕೊಕ್ಕಡ



ಕು. ಸಮೀಕ್ಷಾ
ಧರ್ಮಸ್ಥಳ



ಅರ್ಚನಾ ಚೇತನ್
ಬೆಂಗಳೂರು




ನಿಖಿತ್ ಗೋವರ್ಧನ್
ಕೆನಡಾ

## ನಿಮಗಿದು ತಿಳಿದಿರಲಿ

ಮಾನವನು ದಿನನಿತ್ಯ ಮಾಡುವ ಎಷ್ಟೋ ಕೆಲಸ ಕಾರ್ಯಗಳು ಅವನಿಗೆ ಅರಿದಿಲ್ಲದೆ ಅಪಾಯದ ಹಂತಕ್ಕೆ ತೆಗೆದುಕೊಂಡು ಹೋಗುತ್ತವೆ. ಆಕಸ್ಮಿಕವಾಗಿ ಒಂದು ಕ್ಷಣದಲ್ಲಿ ಆಗುವ ಬೆನ್ನುಹುರಿ ಅಪಘಾತವು ಮಾನವನ ಜೀವನದ ದಿಕ್ಕನ್ನೇ ಬದಲಾಯಿಸಿ ಬಿಡುತ್ತದೆ. ಇದರಿಂದ ಆತನ ಕುಟುಂಬ ಬೀದಿಪಾಲಾಗುವುದರ ಜೊತೆಗೆ ಆ ವ್ಯಕ್ತಿಯ ಕುಟುಂಬ ಮತ್ತು ಸಮಾಜದ ನಿರ್ಲಕ್ಷ್ಯಕ್ಕೆ ಒಳಗಾಗಿ ಮಾನಸಿಕವಾಗಿ ನೊಂದು ಪ್ರಾಣವನ್ನು ಕಳೆದುಕೊಳ್ಳುವ ಸಂಭವವಿರುತ್ತದೆ. ಆದರೆ ಇಷ್ಟೆಲ್ಲಾ ಅನಾಹುತಗಳನ್ನು ತಡೆಗಟ್ಟಬೇಕಾದರೆ ಬೆನ್ನುಹುರಿ ಅಪಘಾತವಾಗುವುದನ್ನು ತಡೆಯುವುದರ ಮೂಲಕ ಮಾತ್ರ ಸಾಧ್ಯ.

## ಬೆನ್ನುಹುರಿ ಅಪಘಾತವನ್ನು ತಡೆಗಟ್ಟುವ ಕ್ರಮಗಳು

### ನೇರವಾಗಿ ಅನುಸರಿಸುವ ವಿಧಾನ :

- ವಾಹನಗಳನ್ನು ಎಚ್ಚರಿಕೆಯಿಂದ ಚಲಿಸುವುದರಿಂದ ಅಪಘಾತವಾಗುವುದನ್ನು ತಪ್ಪಿಸಬಹುದು.
- ವಾಹನಗಳು ಚಲಿಸುತ್ತಿರುವಾಗ ಹತ್ತುವುದಕ್ಕಾಗಲಿ ಮತ್ತು ಇಳಿಯುವುದಕ್ಕಾಗಲಿ ಪ್ರಯತ್ನಿಸಬಾರದು.
- ಮದ್ಯಪಾನ ಸೇವಿಸಬಾರದು.

ಮುಂದಿನ ಪುಟಕ್ಕೆ...

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ & ಮೆಡಿಕಲ್ ಕಿಟ್‌ಗಳು

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

## Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

## ಬೆನ್ನುಹುರಿ ಅಪಘಾತವನ್ನು ತಡೆಗಟ್ಟುವ ಕ್ರಮಗಳು

ಹಿಂದಿನ ಪುಟದಿಂದ...

- ಎತ್ತರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವಾಗ ಮುನ್ನೆಚ್ಚರಿಕೆಯ ಕ್ರಮಗಳನ್ನು ಅನುಸರಿಸುವುದು.
- ತೆಂಗಿನಮರಗಳನ್ನು ಹತ್ತುವಾಗ ಕೃತಕಯಂತ್ರ ಮತ್ತು ಸಾಧನಗಳನ್ನು ಬಳಸುವುದು.
- ಕಟ್ಟಡದ ಕೆಲಸಗಳನ್ನು ನಿರ್ವಹಿಸುವಾಗ ರಕ್ಷಣಾಕವಚಗಳನ್ನು ಬಳಸುವುದು
- ವಿದ್ಯುಚ್ಛಕ್ತಿಯಲ್ಲಿ ಕೆಲಸ ಮಾಡುವವರು ಕೈ ಮತ್ತು ಕಾಲುಗಳಿಗೆ ವಿದ್ಯುತ್ ನಿರೋಧಕ ಕವಚಗಳನ್ನು ತಪ್ಪದೇ ಧರಿಸುವುದು ಮತ್ತು ಜಾಗರೂಕತೆಯಿಂದ ಕಾರ್ಯ ನಿರ್ವಹಿಸುವುದು.
- ಇತರೆ ಕೆಲಸಗಳಾದ (ಮರಳು ತೆಗೆಯುವಾಗ, ಮರಗಳನ್ನು ಕತ್ತರಿಸುವಾಗ, ಮೂಟೆಗಳನ್ನು ಹೊರುವಾಗ) ಅಪಾಯದ ಅಂಚನ್ನು ಗಮನಿಸಿ ಜಾಗರೂಕತೆ ವಹಿಸುವುದು.
- ಬೆನ್ನುಹುರಿ ನೋವು ಕಂಡುಬಂದಲ್ಲಿ ಕೂಡಲೆ ನುರಿತ ವೈದ್ಯರಿಂದ ಚಿಕಿತ್ಸೆ ಪಡೆಯಿರಿ.

## ಏಪ್ರಿಲ್ ತಿಂಗಳಲ್ಲಿ ವಾಕರ್ ವಿತರಣೆ



ಕು. ಗೀತಾ ಕುಲಾಲ್, ಹೆಬ್ರಿ

## ಸೇವಾ ಸಂಗಮ
## ಆನ್‌ಲೈನ್ ಕಾರ್ಯಾಗಾರ




ಏಪ್ರಿಲ್ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ರಮೇಶ್ ಎಚ್, ಪ್ರೋಗ್ರಾಮ್ ಲೀಡ್, ಗಿಫ್ಟ್ ಏಬಲ್ಡ್ ಪೌಂಡೇಶನ್, ಬೆಂಗಳೂರು ಇವರು ಬೆನ್ನುಹುರಿ ಅಪಘಾತ ಕ್ಕೊಳಗಾದ ದಿವ್ಯಾಂಗರಿಗೆ ಜೀವನೋಪಾಯ ಸೌಲಭ್ಯದ ಬಗ್ಗೆ ಮಾಹಿತಿ ಇತ್ತರು. ಕಾರ್ಯಾಗಾರದಲ್ಲಿ ಒಟ್ಟು 35 ಮಂದಿ ಭಾಗವಹಿಸಿದ್ದರು.

## ಏಪ್ರಿಲ್ ತಿಂಗಳ ಸೇವಾ ಕಾರ್ಯಗಳು

| | |
|---|---|
| 1. ಗಾಲಿಕುರ್ಚಿ ವಿತರಣೆ | – 3 |
| 2. ಸೆಲ್ಫ್‌ಕೇರ್ ಮತ್ತು ಮೆಡಿಕಲ್ ಕಿಟ್ | – 16 |
| 3. ವಾಕರ್ ವಿತರಣೆ | – 1 |
| 4. ನೀರಿನ ಹಾಸಿಗೆ | – 2 |




ಯುಗಾದಿ ಸಂಭ್ರಮಾಚರಣೆಯಲ್ಲಿ ಶ್ರೀ ಸುಬ್ರಾಯ ನಂದೋಡಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರನ್ನು ಭೇಟಿ ಮಾಡಿದ ಕ್ಷಣ.

*Disability cannot stop me from becoming a complete personality*

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗನ ಜೀವನದ ದಿಕ್ಕು ಬದಲಿಸಿದ ನರ್ಸರಿ ಗಿಡ ವ್ಯಾಪಾರ ಹಾಗೂ ರಿಯಲ್ ಎಸ್ಟೇಟ್ ಉದ್ಯಮ






ಆಧುನಿಕ ಜಗತ್ತಿನಲ್ಲಿ ತಂತ್ರಜ್ಞಾನವು ಮಿಂಚಿನಂತೆ ವೇಗವಾಗಿ ಬೆಳವಣಿಗೆಯಾಗುತ್ತಿದೆ. ಇತ್ತೀಚಿಗಿನ ದಿನಗಳಲ್ಲಿ ಸಾಮಾಜಿಕ ಜಾಲತಾಣವು ಜನರಲ್ಲಿ ಹೆಚ್ಚಿನ ಪ್ರಭಾವ ಬೀರುತ್ತಿದೆ. ಸಾಮಾಜಿಕ ಜಾಲತಾಣಗಳನ್ನು ಸದುಪಯೋಗ ಮಾಡುವುದಕ್ಕಿಂತ, ಸುಮ್ಮನೆ ಇದರಲ್ಲಿ ಕಾಲಹರಣ ಮಾಡುವವರೇ ಹೆಚ್ಚು. ಆದರೆ ಬೆನ್ನುಹುರಿ ಅಪಘಾತಗೊಂಡು ಜೀವನದಲ್ಲಿ ಏನಾದರೂ ಸಾಧಿಸಬೇಕೆಂಬ ಛಲದಿಂದ ಸಾಮಾಜಿಕ ಜಾಲತಾಣವನ್ನು ಸದುಪಯೋಗ ಪಡೆದುಕೊಂಡು, ಅದರ ಮೂಲಕ ತನ್ನ ಸಹೋದರರಿಗೆ ನರ್ಸರಿ ಉದ್ಯಮದಲ್ಲಿ ಗಿಡಗಳನ್ನು ಮಾರಾಟ ಮಾಡಲು ಸಹಾಯ ಮಾಡಿ, ನಂತರದ ದಿನಗಳಲ್ಲಿ ರಿಯಲ್ ಎಸ್ಟೇಟ್ ಉದ್ಯಮ ಮಾಡಲು ಪ್ರಾರಂಭಿಸಿ ಯಶಸ್ಸಿನ ಜೀವನ ಸಾಗಿಸುತ್ತಿರುವ ಬೆನ್ನುಹುರಿ ಅಪಘಾತ ಕ್ಕೊಳಗಾದ ಸತೀಶ್ ಪೂಜಾರಿಯವರ ಯಶೋಗಾಥೆ ನಿಮ್ಮ ಮುಂದೆ.

ಇವರು ಮೂಲತಃ ಕಕ್ಯಪದವು ಬಂಟ್ವಾಳ ನಿವಾಸಿಯಾಗಿದ್ದು ಜನವರಿ 16, 1985 ರಂದು ಜನಿಸಿದರು. ತಂದೆ ನಾರಾಯಣ ಪೂಜಾರಿ ತಾಯಿ ಚಂದ್ರಾವತಿ ಪೂಜಾರಿ ಹಾಗೂ 2 ಸಹೋದರರನ್ನೊಳಗೊಂಡ ಸುಂದರವಾದ ಕುಟುಂಬ. ತಮ್ಮ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಿಕ್ಷಣವನ್ನು ಕುರಿಯ ಸರಕಾರಿ ಶಾಲೆಯಲ್ಲಿ ಪೂರ್ಣಗೊಳಿಸಿದರು. ತದನಂತರ ಶಿಕ್ಷಣ ಮುಂದುವರೆಸಲು ಆಸಕ್ತಿ ಇಲ್ಲದ ಕಾರಣ ಕೂಲಿ ಕೆಲಸ ಮಾಡಲು ಪ್ರಾರಂಭಿಸಿದರು. ಮುಂದಿನ ದಿನಗಳಲ್ಲಿ ಗಾರೆಕೆಲಸ ಕಲಿತು, ಜೀವನೋಪಾಯವಾಗಿ ಗಾರೆಕೆಲಸಕ್ಕೆ ಕೈ ಹಾಕಿದರು. 15 ವರ್ಷಗಳ ಕಾಲ ಗಾರೆಕೆಲಸ ಮಾಡುತ್ತ ಜೀವನ ಸಾಗಿಸುತ್ತಿದ್ದರು.

ಹೀಗೆ 2016 ರಲ್ಲಿ ಕಟ್ಟಡದ ಮೇಲೆ ನಿಂತು ಕೆಲಸ ಮಾಡುತ್ತಿದ್ದಾಗ ಆಯತಪ್ಪಿ ಕಟ್ಟಡದ ಮೇಲಿನಿಂದ ಕೆಳಗೆ ಬಿದ್ದರು. ತಕ್ಷಣ ಇವರನ್ನು ಮಂಗಳೂರಿನ ಎ.ಜೆ. ಆಸ್ಪತ್ರೆಗೆ ದಾಖಲಿಸಿದರು. ವೈದ್ಯರು 3 ತಿಂಗಳವರೆಗೆ ಚಿಕಿತ್ಸೆ ನೀಡಿ ಮುಂದಿನ ದಿನಗಳಲ್ಲಿ ಸಂಪೂರ್ಣ ಗುಣಮುಖರಾಗುತ್ತಾರೆಂದು ಸುಳ್ಳು ಭರವಸೆ ನೀಡಿ, ಬೆನ್ನುಹುರಿ ಅಪಘಾತ ವಿಷಯದ ಮರೆಮಾಚಿದರು. ಚಿಕಿತ್ಸೆ ಪಡೆದು ಮರಳಿ ಮನೆಗೆ ಬಂದ ನಂತರ ಏನೂ ಬದಲಾವಣೆ ಯಾಗದನ್ನು ನೋಡಿ, ಆಯುರ್ವೇದ ಚಿಕಿತ್ಸೆ ಪ್ರಾರಂಭಿಸಿದರು. ಆದರೆ ಯಾವುದು ಪ್ರಯೋಜನವಾಗಲಿಲ್ಲ. 2-3 ವರ್ಷಗಳವರೆಗೂ ಹಾಸಿಗೆಯಲ್ಲಿ ಮಲಗಿದಲ್ಲೇ ಇದ್ದರು.

ಭರವಸೆ ಕಳೆದುಕೊಂಡು ಜೀವನ ಕಳೆಯುತ್ತಿದ್ದಾಗ ಬೆನ್ನೆಲುಬಾಗಿ ನಿಂತು ಬೆಂಬಲ ಹಾಗೂ ಸಹಾಯ ನೀಡಿದವರು ಇವರ ಕುಟುಂಬ. ಇಂತಹ ಕಷ್ಟ ಸಮಯದಲ್ಲಿ ತಮ್ಮ ಸಹೋದರರು, ಅತ್ತಿಗೆಯಂದಿರು ಹಾಗೂ ತಾಯಿ ಮಾನಸಿಕ ಸ್ಥೈರ್ಯ ಹಾಗೂ ಜೀವನದ ಬಗ್ಗೆ ಭರವಸೆ ಕಳೆದುಕೊಳ್ಳದಂತೆ ಧೈರ್ಯ ನೀಡಿದರು. ಹೀಗೆ 2019 ರಲ್ಲಿ ಏನು ಮಾಡುವುದು ಎಂದು ತೋಚದೇ ಇದ್ದಾಗ ತಮ್ಮ ಸ್ನೇಹಿತರ ಮುಖಾಂತರ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಬಗ್ಗೆ ತಿಳಿದುಕೊಂಡರು. ಅವರನ್ನು ಭೇಟಿ ಮಾಡಿದಾಗ ಇವರದ್ದು 'Cervical Injury' ಆದಕಾರಣ ತಮಿಳುನಾಡಿನ ವೇಲೂರಿನ ಸಿಎಂಸಿ ಆಸ್ಪತ್ರೆಯಲ್ಲಿ ಪುನಶ್ಚೇತನ ಪಡೆಯುವಂತೆ ಸಲಹೆ ನೀಡಿದರು. ಅವರ ಮಾರ್ಗದರ್ಶನದಂತೆ ಅಲ್ಲಿ ಪುನಶ್ಚೇತನ ಪಡೆಯಲು ತೆರಳಿದರು. ಈ ಮೊದಲು ಹಾಸಿಗೆಯಲ್ಲೇ ಮಲಗಿ ಕಾಲ ಕಳೆಯುತ್ತಿದ್ದ ವ್ಯಕ್ತಿ ಪುನಶ್ಚೇತನ ಪಡೆದ ನಂತರ ಗಾಲಿಕುರ್ಚಿಯಲ್ಲಿ ತುಂಬ ಸಮಯದವರೆಗೆ ಕುಳಿತುಕೊಳ್ಳಲು ಕಲಿತರು. ಪುನಶ್ಚೇತನದ ನಂತರ ಜೀವನ ಮಾಡಬೇಕೆಂಬ ಹುಮ್ಮಸ್ಸು ಪ್ರಾರಂಭವಾಗಿ ಜೀವನೋಪಾಯಕ್ಕಾಗಿ ಏನಾದರೂ ಉದ್ಯೋಗ ನಡೆಸಬೇಕೆಂದು ನಿರ್ಧರಿಸಿದರು. ಸೇವಾಭಾರತಿ ವತಿಯಿಂದ ಇವರು ಅಗತ್ಯವಿರುವ ಸೆಲ್ಫ್‌ಕೇರ್ ಕಿಟ್ ಹಾಗೂ ಮೆಡಿಕಲ್ ಕಿಟ್‌ನ್ನು ಪಡೆದಿರುತ್ತಾರೆ.

ಜೀವನೋಪಾಯದ ಬಗ್ಗೆ ಯೋಚನೆ ಮಾಡುತ್ತ 2020 ರಲ್ಲಿ ತಮ್ಮ ಅಣ್ಣಂದಿರು ನಡೆಸುತ್ತಿದ್ದ ನರ್ಸರಿ ವ್ಯಾಪಾರದಲ್ಲಿ ಸಹಕರಿಸಿದರು. ತಮ್ಮ ಸಹೋದರರು ಬೆಳೆಸಿದಂತಹ ಅಡಿಕೆ ಹಾಗೂ ಕರಿಮೆಣಸು ಗಿಡಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾವಚಿತ್ರ ಹಾಕುವುದರ ಮೂಲಕ ಅಗತ್ಯವಿರುವವರಿಗೆ ಗಿಡಗಳನ್ನು ಮಾರಾಟ ಮಾಡಲು ಪ್ರಾರಂಭಿಸಿದರು. ಮಾರಾಟ ಮಾಡಲು ಪ್ರಾರಂಭಿಸಿದ ಮೊದಲ ವರ್ಷದಲ್ಲೇ 300 ಗಿಡಗಳನ್ನು ಮಾರಾಟ ಮಾಡಿದರು. ಮುಂದಿನ ವರ್ಷ 25000 ಗಿಡಗಳನ್ನು ಮಾರಾಟ ಮಾಡುವಲ್ಲಿ ಯಶಸ್ವಿಯಾದರು. ಶ್ರೀ ಕೆ. ವಿನಾಯಕ ರಾವ್ ಅವರು ಉಪಯೋಗಿಸುತ್ತಿದ್ದ ನಿಯೋ ಮೋಶನ್ ಕಂಪೆನಿಯ ಬ್ಯಾಟರಿ ಚಾಲಿತ ಗಾಲಿಕುರ್ಚಿಯಿಂದ ಪ್ರೇರೇಪಣೆಗೊಂಡು ಅವರಿಂದ ತರಬೇತಿ ಪಡೆದು ನಿಯೋಮೋಶನ್‌ನ ನಿಯೋ ಬೋಲ್ಟ್ ಗಾಡಿ ಖರೀದಿಸಿ ವ್ಯವಹಾರ ಸುಗಮವಾಗಿಸಿಕೊಂಡು ಜೀವನದ ವಿಜಯ ಪಥದ ಕಡೆಗೆ ಮುನ್ನಡೆಯುತ್ತಿದ್ದಾರೆ.

ಇದರ ಜೊತೆಗೆ ಸ್ನೇಹಿತನ ಮುಖಾಂತರ ಮೊಬೈಲ್ನಲ್ಲಿ ರಿಯಲ್ ಎಸ್ಟೇಟ್ ಉದ್ಯಮ ಮಾಡಲು ಪ್ರಾರಂಭಿಸಿ, ಇದರಲ್ಲೂ ಯಶಸ್ಸು ಪಡೆದರು. ಪ್ರಸ್ತುತ ಇವರು ಅಡಿಕೆ, ಕಾಳುಮೆಣಸು ಗಿಡಗಳನ್ನು ಮಾರಾಟ ಮಾಡುವುದರ ಜೊತೆಗೆ ರಿಯಲ್ ಎಸ್ಟೇಟ್ ಉದ್ಯಮ ನಡೆಸುತ್ತಾ ಎಲ್ಲರಿಗು ಮಾದರಿ ಜೀವನ ನಡೆಸುತ್ತಿದ್ದಾರೆ.